## ಕಳೆದ ಸಂಚಿಕೆಯಲ್ಲಿ



ಸರೋಜಳಿಗೆ ಇಂಗ್ಲಿಷ್ ಪಾಠ ಹೇಳಲು ಹೋದ ಶ್ರೀನಿವಾಸರಾಯರು ನಿಧಾನವಾಗಿ ತಮ್ಮ ವಿದ್ಯಾರ್ಥಿನಿಯ ಆಕರ್ಷಣೆಗೆ ಒಳಗಾಗತೊಡಗಿದರು. ತಾರುಣ್ಯದ ಬಿಸುಪು ಇಬ್ಬರ ನಡುವೆ ಮಧುರ ಭಾವಗಳನ್ನು ಸೃಷ್ಟಿಸಿತು. ಪರಸ್ಪರ ಸ್ಪರ್ಶಕ್ಕೆ, ಹಿತವಾದ ಮಾತುಕತೆಗಳಿಗೆ ಇಬ್ಬರೂ ಕಾತರಿಸತೊಡಗಿದರು. ಆದರೆ, ಈ ಪ್ರೇಮ ಪ್ರಕರಣ ಮದುವೆಯ ರೂಪದಲ್ಲಿ ಸುಖಾಂತ್ಯಗೊಳ್ಳುವುದು ಸುಲಭವಾಗಿರಲಿಲ್ಲ. ಜಾತಿಯ ಕಾರಣಕ್ಕಾಗಿ ಸರೋಜಾಳ ಅಪ್ಪ ಮದುವೆಗೆ ಸ್ಪಷ್ಟ ನಕಾರ ಸೂಚಿಸಿದರು. ಆದರೆ, ಸರೋಜಾಳ ನಿಲುವು ಬದಲಾಗಲಿಲ್ಲ. ಪ್ರೇಮದ ಕಾರಣಕ್ಕಾಗಿಯೇ ಶ್ರೀನಿವಾಸರಾಯರು ಕೆಲಸ ಮತ್ತು ಊರು ಬದಲಿಸಬೇಕಾಯಿತು. ಸರೋಜಾಳ ವಿದ್ಯಾಭ್ಯಾಸ ಮುಗಿದ ನಂತರ ಇಬ್ಬರೂ ಮದುವೆಯಾದರು. ಬ್ರಾಹ್ಮಣ ಯುವಕ – ಬಂಟರ ಹುಡುಗಿಯ ಮದುವೆ ಬಸವಣ್ಣ ಬಯಸಿದ ಅಂತರ್ಜಾತಿ ವಿವಾಹದ ಆಶಯಕ್ಕೆ ತಕ್ಕಂತಿತ್ತು.

ಅದೃಷ್ಟವೋ ಎಂಬಂತೆ ನಾನು ಅಣ್ಣಂದಿರ ಕರಾರು ಪ್ರಕಾರ ಅವರಿಗೆ ನೀಡಬೇಕಾದದ್ದನ್ನೆಲ್ಲ ನಿಯಮದಂತೆ ನೀಡಿದ ಮೇಲೂ ಹೋಟೆಲಿನ ಖರ್ಚು ವೆಚ್ಚಗಳನ್ನೆಲ್ಲ ಕಳೆದು ಪ್ರತಿತಿಂಗಳೂ ನಾಲ್ಕೈದು ಸಾವಿರ ರೂಪಾಯಿಗಳು ನನ್ನ ಖಾತೆಗೆ ಜಮಾ ಆಗುತ್ತಿತ್ತು. ಆ ಧೈರ್ಯದಲ್ಲೇ ಮದುವೆ ಆದರೆ ಆದೀತೆಂದು ಯೋಚಿಸಿ ಅಪ್ಪನಿಗೆ ಪತ್ರ ಬರೆದೆ. ಅವರು ಆಗಲೇ ಸಾಕಷ್ಟು ಹುಡುಗಿ ಹುಡುಕಿದ್ದರೂ ಅಣ್ಣಂದಿರ ಕೈಕೆಳಗೆ ಇರುವವನಿಗೆ ಹುಡುಗಿ ಕೊಡುವುದಿಲ್ಲ ಎಂಬ ಮಾತನ್ನೂ ಕೇಳಿ ಹುಡುಗಿ ಹುಡುಕುವುದನ್ನೇ ಕೈಬಿಟ್ಟಿದ್ದರು. ನನ್ನ ಪತ್ರ ಹೋದಾಗ ಈಗ ನನ್ನ ಪತ್ನಿಯಾಗಿರುವ ರಾಜೇಶ್ವರಿಯ ಅಪ್ಪ ಮೂಡಬಿದ್ರೆಯ ಪುಟ್ಟ ಹೋಟೆಲಿನ ಸಾಹುಕಾರ ಪರಮೇಶ್ವರ ಶೆಟ್ಟರು 'ಯಾವುದಕ್ಕೂ ನಾನೊಮ್ಮೆ ಹೋಗಿ ಹೋಟೆಲ್ ನೋಡಿ ಬರುತ್ತೇನೆ' ಎಂದು ನನ್ನ ಅಪ್ಪನಿಗೆ ತಿಳಿಸಿ, ರಾಂಪುರಕ್ಕೆ ಬಂದರು. ಅವರು ಆ ದಿನ ನಮ್ಮ ಹೋಟೆಲಿನಲ್ಲೇ ವಾಸ್ತವ್ಯ ಇದ್ದು, ಎಲ್ಲವನ್ನೂ ನೋಡಿ ಊರಿಗೆ ಮರಳಿದವರೇ ನನ್ನ ಅಪ್ಪನಿದ್ದಲ್ಲಿಗೆ ಹೋಗಿ 'ನಿಮ್ಮ ಮಗನ ಕಾಲು ಊನ ಎನ್ನುವುದು ಬಿಟ್ಟರೆ, ಹುಡುಗ ತುಂಬಾ ಬುದ್ಧಿವಂತ. ಖಂಡಿತ ನನ್ನ ಮಗಳನ್ನು ಕೊಡುತ್ತೇನೆ' ಎಂದರು.

ಹಾಗೆ ನಾನು ರಾಜೇಶ್ವರಿಯನ್ನು ಮದುವೆಯಾದೆ. ಮದುವೆಗೆ ಇಬ್ಬರು ಅಣ್ಣಂದಿರೂ ದಂಪತಿ ಸಮೇತ ಬಂದಿದ್ದರು. ಅವರ ಗತ್ತು ದೌಲತ್ತು ಆಡಂಬರದ ಉಡುಗೆ ತೊಡುಗೆ ಎಲ್ಲವೂ ಬಂದವರ ಕಣ್ಣು ಕುಕ್ಕುತ್ತಿದ್ದರೂ ನನ್ನ ಪತ್ನಿಗೆ ಅದರಲ್ಲಿ ಆಕರ್ಷಣೆ ಕಾಣಲಿಲ್ಲ. ಚಾಪೆ ಇದ್ದಷ್ಟೇ ಕಾಲು ಚಾಚಬೇಕು ಎನ್ನುವ ನನ್ನ ಮರ್ಜಿಗೆ ಸರಿಯಾಗಿ ಅವಳು ಆ ದಿನದಿಂದಲೇ ನಡೆದುಕೊಳ್ಳಬಯಸಿದಳು.'

ಇಷ್ಟನ್ನು ಹೇಳಿ ನಿಲ್ಲಿಸಿದ ಸದಾಶಿವ ಶೆಟ್ಟರು 'ಸರೋಜಕ್ಕ, ನಿಮ್ಮ ಮದುವೆಯ ಡಿನ್ನರ್ ಪಾರ್ಟಿ ಆದದ್ದು ನಮ್ಮ ಹೋಟೆಲಿನಲ್ಲೇ ಎಂದು ಹೇಳಿದಿರಲ್ಲ, ಆಗ ನಾನು ಹೋಟೆಲಿನ ಜವಾಬ್ದಾರಿ ವಹಿಸಿಕೊಂಡು ಕೇವಲ ಹತ್ತು ತಿಂಗಳಾಗಿತ್ತಷ್ಟೇ. ಅಷ್ಟೇ ಅಲ್ಲ, ನನ್ನ ಮದುವೆಯಾಗಿ ಆಗ ಕೇವಲ ಎರಡೇ ಎರಡು ತಿಂಗಳು ಮಾತ್ರ ಆಗಿತ್ತು' ಎಂದರು.

ಸರೋಜಮ್ಮ 'ಇಷ್ಟೆಲ್ಲಾ ಪುರಾಣ ಉಂಟಾ ಸದಾಶಿವಣ್ಣ ನಿಮ್ಮದು! ಇದನ್ನೆಲ್ಲ ಹೇಳಲೇ ಇಲ್ಲ ನೀವು?' ಎನ್ನುತ್ತಿದ್ದಂತೆ ಸದಾಶಿವ ಶೆಟ್ಟರು – 'ಯಾರ ಪುರಾಣ ಯಾರು ಕೇಳಿ ಏನಾಗಬೇಕು ಸರೋಜಕ್ಕ? ನಾನು ಈಗ ಈ ವಿಚಾರ ಹೇಳಲಿಕ್ಕೆ ಹೊರಟದ್ದು ಯಾಕೆಂದರೆ, ನೀವು ಈಗ ಈ ಊರಿಂದ ಹೊರಡಬೇಕು ಎಂದು ಯಾರೋ ನಿಮ್ಮ ಮೇಲೆ ಒತ್ತಡ ತರುತ್ತಿದ್ದಾರಲ್ಲ ಅದನ್ನು ನೋಡಿ! ನನ್ನ ಅಣ್ಣಂದಿರೂ ಒಂದೆರಡು ವರ್ಷದಿಂದ ಈಚೆಗೆ ನನಗೆ ಇಲ್ಲಿರುವ ಮನೆ ಬಿಟ್ಟು ಹೋಗು ಅನ್ನಲು ಹತ್ತಿದ್ದಾರೆ. ನಾನು ಸ್ವಂತದ್ದು ಅಂತ ಏನೂ ಮಾಡಲಿಲ್ಲ. ನನಗೆ ನನ್ನದೇ ಆದ ಮನೆಯಿಲ್ಲ, ಮಕ್ಕಳಿಲ್ಲ. ಹೋಟೆಲನ್ನು ಬಿಟ್ಟುಕೊಡು ಎಂದಾಗ ನಾನು ಅಣ್ಣಂದಿರಿಗೆ ಬಿಟ್ಟುಕೊಟ್ಟು ಬಂದೆ. ಈಗ ಇಲ್ಲಿಂದಲೂ ಹೋಗು ಅಂದರೆ ಎಲ್ಲಿಗೆ ಹೋಗುವುದು ಅಂದರೆ, ಅಣ್ಣಂದಿರು ಗೊತ್ತಿಲ್ಲ' ಎಂದು ತಾರಮ್ಮಯ್ಯ ಮಾಡಿ ಸುಮ್ಮನಾಗುತ್ತಾರೆ' ಎಂದರು.

ಅಷ್ಟರಲ್ಲಿ ರಾಯರು 'ಸರೋಜ ಇದೆಲ್ಲ ಶೆಟ್ಟರು ಈಗ ತಾನೇ ನಿನಗೆ ಹೇಳಿದ್ದು! ಆದರೆ ನಾವು ರಾಂಪುರದಲ್ಲಿರುವಾಗ ನಮ್ಮ ವಾಕಿಂಗ್‌ನ ಹೊತ್ತಲ್ಲಿ ಇದನ್ನೆಲ್ಲ ಸಾಕಷ್ಟು ಮಾತನಾಡಿಕೊಂಡಿದ್ದೇವೆ. ನೀನು ನನಗೆ ರಾಂಪುರದ ಹವಾ ಹಿಡಿಯುವುದಿಲ್ಲ. ನಾವು ಊರಿಗೆ ಹೋಗೋಣ ಎಂದು ನನ್ನನ್ನು ಕೇಳಿದಾಗ ನಾನು 'ಎಲ್ಲಿಗೆ ಅನ್ನುವುದನ್ನು ನೀನೇ ನಿರ್ಧರಿಸು' ಎಂದದ್ದಕ್ಕೆ ನೀನು – 'ಕುಂದಾಪುರವಂತೂ ಬೇಡವೇ ಬೇಡ. ನಿಮ್ಮ ಕೊಪ್ಪರಿಗೆಯೂ ಆದೀತು ಎಂದಿದ್ದಿ. ಅಷ್ಟು ರೋಸಿ ಹೋಗಿತ್ತು ನಿನ್ನ ಮನಸ್ಸು! ಅದೇ ಸುಮಾರಿಗೆ ಶೆಟ್ಟರಿಗೂ ಅವರ ಅಣ್ಣಂದಿರಿಗೂ ಇರುವ ಜಗಳ ತಾರಕಕ್ಕೇರಿತ್ತು. ಶೆಟ್ಟರ ದೊಡ್ಡಣ್ಣ ವ್ಯವಹಾರದಲ್ಲಿ ತುಂಬಾ ನಷ್ಟ ಅನುಭವಿಸಿ ಮತ್ತೆ ರಾಂಪುರಕ್ಕೆ ಬರಲು ಆಗ ನಿಶ್ಚಯಿಸಿದ್ದರಂತೆ. ಅವರಿಗೆ ಆಗ ಹೊಳೆದ ಸುಲಭ ಉಪಾಯ ಅಂದರೆ ತನ್ನ ತಮ್ಮ ಸದಾಶಿವ ಶೆಟ್ಟರನ್ನು ಮತ್ತು ಅವರ ಹೆಂಡತಿ ರಾಜೇಶ್ವರಿಯನ್ನು ಸೀತಾಪುರಕ್ಕೆ ಕಳುಹಿಸುವುದು ಮತ್ತು ಡಿಕ್ಲರೇಷನ್ ಮೂಲಕ ಬಂದಿರುವ ಜಮೀನನ್ನೂ ತಾನೇ ಅನುಭವಿಸುವುದು ಎನ್ನುವುದಾಗಿತ್ತು. ಹಾಗಾಗಿ ಈ ನಮ್ಮ ಸದಾಶಿವಶೆಟ್ಟರಿಗೆ ಊರಲ್ಲೂ ಜಮೀನಿಲ್ಲ, ಇಲ್ಲಿ ಹೋಟೆಲ್ ಇಲ್ಲ ಎಂಬಂತಾಗಿ 'ಏನು ಮಾಡೋದು?' ಎಂಬಂತಾಗಿ ಅವರು ಆ ದಿನಗಳಲ್ಲಿ ನನ್ನನ್ನು ಮತ್ತೆ ಮತ್ತೆ ಏನು ಮಾಡಬೇಕು ಎಂದು ಕೇಳುತ್ತಿದ್ದರು. ಇದಕ್ಕೆ ಪರಿಹಾರವಾಗಿ ನಾವಿಬ್ಬರು ಒಟ್ಟಾಗಿ ವಕೀಲರನ್ನು ಭೇಟಿ ಮಾಡಿದಾಗ ವಕೀಲರು 'ಹೋಟೆಲಿನ ವಿಚಾರದಲ್ಲಿ ನೀವು ಕ್ಲೈಮ್ ಮಾಡಲಿಕ್ಕೆ ಬರೋದಿಲ್ಲ' ಎಂಬ ಸಲಹೆ ನೀಡಿ, ಊರಿಗೆ ಹೋಗುವುದಾದರೆ ಹೋಗಿ. ಅಲ್ಲಿ ನಿಮ್ಮ ಅಪ್ಪ ಅಮ್ಮ ಇದ್ದ ಮನೆಯಲ್ಲೇ ವಾಸ್ತವ್ಯ ಹೂಡಿ. ಅಲ್ಲಿರುವ ಜಮೀನನ್ನು ನೋಡಿಕೊಳ್ಳಿ, ಮುಂದೆ ಅಣ್ಣಂದಿರು ಇದರಲ್ಲಿ ನಿನಗೆ ಪಾಲಿಲ್ಲ ಅಥವಾ ನಾವು ಈ ಜಮೀನನ್ನು ಮಾರುತ್ತೇವೆ ಎಂದಾಗ 'ನೀವು ವಕೀಲರ ಮೊರೆ ಹೋಗಿ ವ್ಯಾಜ್ಯ ದಾಖಲು ಮಾಡಿ. ಆದರೆ ತಪ್ಪಿಯೂ ಮನೆಯಿಂದ ಹೊರಡಬೇಡಿ' ಎಂದದ್ದಲ್ಲದೆ, 'ಭೂ ಮಸೂದೆಯ ರೀತ್ಯಾ ಬಂದ ಆಸ್ತಿಯು ನಿಮ್ಮ ಅಪ್ಪ ಅಮ್ಮನ ಹೆಸರಲ್ಲಿ ಇರುವುದರಿಂದ ನಿಮಗೆ ಆ ಆಸ್ತಿಯಲ್ಲಿ ಮೂರನೇ ಒಂದು ಭಾಗದ ಪಾಲು ಸಿಗುತ್ತದೆ' ಎಂದಿದ್ದರು. ಅದಕ್ಕೇ ನೀನು 'ನಾವು ಇಲ್ಲಿಂದ ಹೊರಡೋಣ' ಎಂದು ಹೇಳಿದಾಗ ನಾವೂ ಸೀತಾಪುರಕ್ಕೆ ಹೋಗೋಣ ಎಂದದ್ದು' ಎಂದರು.

ಸರೋಜಮ್ಮನಿಗೆ ಇದೆಲ್ಲವೂ ಆಶ್ಚರ್ಯವಾಗಿ ಕಂಡಿತು. ಅವರು 'ಹೌದು, ಸದಾಶಿವಣ್ಣನಿಗೆ ಇಷ್ಟು ಕಷ್ಟ ಇದ್ದರೂ ಅವರು ನಮ್ಮೊಂದಿಗೆ ಇರುವುದೇ ದೊಡ್ಡ ಉಪಕಾರ' ಎಂದರು.

ಶೆಟ್ಟರು ದೊಡ್ಡದಾಗಿ ನಗುತ್ತಾ 'ನನ್ನಿಂದ ನಿಮಗೆ ಎಂಥ ಉಪಕಾರ ಇದೆ ಸರೋಜಕ್ಕ? ರಾಯರು ಇದ್ದಾರೆ ಎನ್ನುವುದೇ ನನಗೆ ಧೈರ್ಯ. ನಮ್ಮ ದೊಡ್ಡಣ್ಣ ಹುಂಬ ಮತ್ತು ಜಂಬದ ಕೋಳಿ. ಮೊದಲಿನಿಂದಲೂ ನಾನೆಂದರೆ ಅವನಿಗೆ ಅಷ್ಟಕಷ್ಟೆ. ಮೇಲಾಗಿ ಅಪ್ಪ ಅಮ್ಮನಿಗೆ ನಾನೆಂದರೆ ಪ್ರೀತಿ ಇದ್ದಷ್ಟೇ ಅಂಗವಿಕಲ ಎಂಬ ಸಹಾನುಭೂತಿಯೂ ಇತ್ತೆನ್ನುವುದು ದೊಡ್ಡಣ್ಣನಿಗೆ ಗೊತ್ತಿತ್ತು. ಆದರೆ ಅದು ಅತಿರೇಕ ಅಂತ ಅವನಿಗೆ ಅನಿಸಿತ್ತು. ಅದಕ್ಕೇ ಆತ 'ಅವನಲ್ಲಿ ಏನಿದೆ ಎಂದು ನೀವು ಅವನನ್ನು ಹಚ್ಚಿಕೊಂಡದ್ದು?' ಎಂದು ನಾಲ್ಕಾರು ಬಾರಿ ನನ್ನ ಅಮ್ಮನನ್ನು ಪ್ರಶ್ನಿಸಿದ್ದುಂಟು. ಅಂಥ ಸಂದರ್ಭಗಳಲ್ಲಿ ಅಮ್ಮ 'ಅಯ್ಯೋ ದೇವರೇ, ಇಂಥ ಬುದ್ಧಿ ಯಾಕೆ ಬಂತಪ್ಪ ಈ ನನ್ನ ಮಗನಿಗೆ?' ಎಂದು ಮರುಗಿ, ಒಂದೇ ಒಂದು ಹೆಣ್ಣು ಮಗುವನ್ನು ದೇವರು ನನಗೆ